# ಶೇಷಚಂದ್ರಿಕಾಚಾರ್ಯರು

ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆ -

ಶೇಷಚಂದ್ರಿಕಾ ಆರ್ಯರೇ ಶರಣು ಶೇಷಚಂದ್ರಿಕಾ
ಶೇಷಶಾಯಿ ನಿರ್ದೋಷ ಗುಣಾಂಬುಧಿ ಶ್ರೀಶಗೆ । ಪ ।
ಪ್ರಿಯ ರಘುನಾಥ ಯತೀಂದ್ರ-
ಇಂದಿರಾ ಸಹ ಹಂಸ ಬೋಧಿತ
ಮಂದಜಭವ ಸನಕಾದ್ಯರ ವಂಶಜಾ
ನಂದ ಮುನೀಂದ ಪರಂಪರ ಲಕ್ಷ್ಮೀ
ನಾರಾಯಣ ಯೋಗೀಂದ್ರ ಸಂಜಾತ ಶೇಷಚಂದ್ರಿಕಾರ್ಯರೇ । ೧ ।
ಭೈಷ್ಮಿ ವೈಥಿಲಿ ಈಶ ಶ್ರೀಕೃಷ್ಣರಾಮನ್ನ
ತೋಷಿಸಿ ತಂತ್ರ ಸುಸಾರದಿ ಅರ್ಚಿಸಿ
ಭಾಷ್ಯ ದೀಪಿಕಾರ್ಯ ತತ್ ಶಿಷ್ಯ ಜಗನ್ನಾಥ
ಯತಿ ಸಂಸೇವಿತ ಕಾವೇರಿ ನರ-
ಸಿಂಹ ಕ್ಷೇತ್ರದಿ ಇಪ್ಪ ಶೇಷಚಂದ್ರಿಕಾ ಆರ್ಯರೇ ಶರಣು । ೨ ।
ಬಂಧು ಭಯದಿಂದ ಹೊರನಿಂದೆ ಮಂದನ್ನ
ದಯದಿಂದ ಒಳಕರತಂದು ಸದನುಸಂಧಾನ
ಒದಗಿಸಿ ಅರವಿಂದಜ ತಾತ
"ಪ್ರಸನ್ನ ಶ್ರೀನಿವಾಸ" ಪ್ರಿಯಕರ ನರಾಂಶ
ಸಂಯುತ ಗುರುವರ ಮಹಂತ ಶರಣು । ೩ ।

## ರಾಗ – ಶ್ರೀರಾಗ          ಆದಿತಾಳ

ಪ್ರಾರ್ಥಿಸುವೆ । ರಘುನಾಥತೀರ್ಥರ ।
ಪ್ರಾರ್ಥಿಸುವೆ । ಪುರುಷಾರ್ಥಪ್ರದರ ।    ಪ ।
ಸಾರ್ಥಕವಾಗಲು ಪಾರ್ಥಿವದೇಹವು ।
ಪಾರ್ಥಸಖನೆ ಸರ್ವೋತ್ತಮನೆಂದು
ಸಮರ್ಥಿಸಿ ಜಗದಲಿ ಕೀರ್ತಿ ಗಳಿಸಿದವರ ॥ ಅ.ಪ ॥
'ನೇದೃಶಂ ಸ್ಥಲಮಲಂ ಶಮಲಘ್ನಂ'
'ನಾಸ್ಯತೀರ್ಥ ಸಲಿಲಸ್ಯ ಸಮಂ ವಾ: ।
ನಾಸ್ತಿ ವಿಷ್ಣು ಸದೃಶಂ ನನುದೈವಂ'
ಸತ್ಯವಚನಗಳಿವೆಂದು ಸೂಚಿಸುತ ।
ಆಸ್ತಿಕ ಜನಮನ ರಂಜಕ ತ್ರಿಮಕುಟ
ಕ್ಷೇತ್ರನಿವಾಸ ಪವಿತ್ರತಮ ಚರಿತರ ॥ ೧ ॥
ವ್ಯಾಸರಾಜ ಗುರುವರ್ಯ ರಚಿತ ತಾ–
ತ್ಪರ್ಯಚಂದ್ರಿಕಾ ಗ್ರಂಥವನು ।
ವಾಸುದೇವ ನರಹರ್ಯನುಗ್ರಹದಿ
ಉರ್ವರಿತವ ವಿರಚಿಸಿ ಮೆರೆದ ।
ಶೇಷಚಂದ್ರಿಕಾಚಾರ್ಯರೆಂಬೋ ಗುರು
ವ್ಯಾಸರಾಜರಪರಾವತಾರರ ॥ ೨ ॥
ರಾಗದ್ವೇಷಗಳ ತೊರೆಯುತ ತನ್ನನು–
ರಾಗದಿಂದ ಭಜಿಸುವ ಜನಕೆ ।
ಭೂಗಕಲ್ಪತರುವಂತೆ ಅರಿಷ್ಟವ ನೀಗಿ
ಸಾಧುಭೋಗಗಳೀವ ।
ಯೋಗಿಜನ ಮನೋನಯನ ಪ್ರಸನ್ನ ಶ್ರೀ
ರಾಘವೇಂದ್ರರಪರಾವತಾರರ ॥ ೩ ॥

ರಾಗ – ಕಮಾಚ್ – ಏಕತಾಳ

ವೇದಾಂತ ಸಾಮ್ರಾಜ್ಯ ರಾಜಾಧಿರಾಜ ।
ತೇಜೋಮಯರ ಪಾದಾಬ್ಜವೇ ಶರಣ । ಪ ।
ರಾಜಾಧಿರಾಜ ಕರಾರ್ಚಿತ ಚರಣ ।
ಪ್ರಾಜ್ಯಪ್ರಜ್ಞರ ಶುದ್ಧಕುಲದಿವ್ಯಾಭರಣ । ಅ.ಪ ।
ಭ್ರಾಂತಿಗೆ ನಿಧನ ಸುಖಶಾಂತಿಗೆ ಸದನ ವೇ ।
ದಾಂತಿಯ ಮಾನಸ ಕಾಂತಿಗೆ ಸಾಧನ । ೧ ।
ಇಂದಿರಾಪತಿಯ ಆನಂದಾದಿ ಸದ್ಗುಣ ।
ವೃಂದ ತೋರಿದ ಶೇಷಚಂದ್ರಿಕಾಚಾರ್ಯ । ೨ ।
ಹಿರಿದು ನಿಮ್ಮಯ ವ್ಯಾಪ್ತಿ ಕಿರಿದು ಎಮ್ಮಯ ಶಕ್ತಿ ।
ಪರಮ ಪ್ರಸನ್ನ ಶ್ರೀಗುರುಸಾರ್ವಭೌಮ । ೩ ।

ಸಂಗ್ರಹ – ನರಹರಿಸುಮಧ್ವ